**II Semester of 3 Year LL.B., Degree Examination, June 2010**
**ADMINISTRATIVE LAW**
**(Course – IV)**

Duration : 3 Hours | Max. Marks : 100

**Instructions :** 1. Answer all **5** questions.
2. **One** essay type and **one** short note question or problem from **each unit** have to be attempted, which is referred as part (a) and (b) in all the units.
3. Figures to the right indicate marks.
4. Answers should be written **either** in English or Kannada **completely**.

UNIT – I

Q. No. 1. (a) Discuss the nature and scope of administrative law. Marks : 15
ಆಡಳಿತಾತ್ಮಕ ಕಾನೂನಿನ ಸ್ವರೂಪ ಮತ್ತು ವ್ಯಾಪ್ತಿಯನ್ನು ಚರ್ಚಿಸಿ.
OR/ಅಥವಾ
Explain the components of 'Rule of law'.
'ಕಾನೂನಿನ ಆಧಿಪತ್ಯ'ದ ಘಟಕಗಳನ್ನು ವಿವರಿಸಿ.

(b) Write a note on enforceability of administrative directions. Marks : 5
ಆಡಳಿತಾತ್ಮಕ ನಿರ್ದೇಶನಗಳ ಜಾರಿಗೊಳಿಸುವಿಕೆಯ ಬಗ್ಗೆ ಟಿಪ್ಪಣಿ ಬರೆಯಿರಿ.
OR/ಅಥವಾ
'A' a government officer vested with discretion to grant permission for transplantation of kidney announced a policy to be applied by him to all cases coming before him for decision. 'P' an applicant who is refused permission challenges the decision of 'A'. Decide.
'ಅ' ಎನ್ನುವ ಸರಕಾರಿ ಅಧಿಕಾರಿಗೆ ಮೂತ್ರ ಪಿಂಡಗಳ ಕಸಿ ಮಾಡುವುದಕ್ಕೆ ಪರವಾನಿಗೆ ನೀಡಲು ವಿವೇಚನಾ ಅಧಿಕಾರವನ್ನು ನೀಡಲಾಗಿದೆ. ಆ ಅಧಿಕಾರಿಯು ತನ್ನ ಮುಂದೆ ಬರುವ ಎಲ್ಲಾ ಪ್ರಕರಣಗಳನ್ನು ತೀರ್ಮಾನಿಸಲು ಒಂದು ನೀತಿಯನ್ನು ಘೋಷಿಸುತ್ತಾನೆ. ಪರವಾನಿಗೆ ಸಿಗದ 'ಪಿ' ಎನ್ನುವ ಅರ್ಜಿದಾರನು 'ಅ'ನ ನಿರ್ಧಾರವನ್ನು ಪ್ರಶ್ನಿಸಿದ್ದಾನೆ. ತೀರ್ಮಾನಿಸಿರಿ.

UNIT – II

Q. No. 2. (a) Define delegated legislation and state the reasons for its growth. Marks : 15
ಪ್ರತ್ಯಾಯೋಜಿತ ಕಾನೂನನ್ನು ವ್ಯಾಖ್ಯಾನಿಸಿರಿ ಹಾಗೂ ಅದರ ಬೆಳವಣಿಗೆಯ ಕಾರಣಗಳನ್ನು ಹೇಳಿರಿ.

OR/ಅಥವಾ

P.T.O.

Explain judicial control over delegated legislation with the help of decided cases.

ಪ್ರತ್ಯಾಯೋಜಿತ ಕಾನೂನಿನ ಮೇಲೆ ನ್ಯಾಯಾಲಯಗಳ ನಿಯಂತ್ರಣವನ್ನು ನಿರ್ಧರಿತ ಪ್ರಕರಣಗಳ ಸಹಾಯದಿಂದ ವಿವರಿಸಿರಿ.

(b) An Act of a state contains a provision that the state Government mayextend any section of the Act to a particular area subject to "Such restrictions and modifications as the Governments may deem fit. Is the delegation valid ? Marks : 5

ರಾಜ್ಯ ಸರಕಾರವು ಅಧಿನಿಯಮದ ಯಾವುದೇ ಕಲಮನ್ನು ನಿರ್ದಿಷ್ಟ ಪಡಿಸಿದ ಕ್ಷೇತ್ರಕ್ಕೆ "ಸರಕಾರಕ್ಕೆ ಸರಿ ಎನಿಸಿದ ನಿರ್ಬಂಧ ಹಾಗೂ ಮಾರ್ಪಾಡುಗಳೊಂದಿಗೆ' ವಿಸ್ತರಿಸಬಹುದೆಂಬ ನಿಯಮವನ್ನು ರಾಜ್ಯದ ಒಂದು ಅಧಿನಿಯಮ ಒಳಗೊಂಡಿದೆ. ಈ ಪ್ರತ್ಯಾಯೋಜನೆಯು ವಿಧಿ ಬದ್ದವೇ ?

OR/ಅಥವಾ

An Act of a State imposed sales tax on goods. Items mentioned in the schedule were exempted from tax. The Act conferred power on the state Government to add or delete items from the schedule. Before doing so, the Government had to give three months notice and consult affected interests. Is the delegation valid ?

ರಾಜ್ಯದ ಒಂದು ಅಧಿನಿಯಮವು ಸರಕುಗಳ ಮೇಲೆ ಮಾರಾಟ ಕರ ವಿಧಿಸಿತ್ತು. ಅನುಸೂಚಿಯಲ್ಲಿ ನಮೂದಿಸಿದ ಸರಕುಗಳಿಗೆ ಕರದಿಂದ ವಿನಾಯಿತಿ ನೀಡಲಾಗಿತ್ತು. ಅಧಿನಿಯಮವು ಸರಕಾರಕ್ಕೆ ಅನುಸೂಚಿಗೆ ಯಾವುದೇ ಸರಕನ್ನು ಸೇರಿಸುವ ಅಥವಾ ತೆಗೆದು ಹಾಕುವ ಅಧಿಕಾರವನ್ನು ಪ್ರಧಾನ ಮಾಡಿತ್ತು. ಹಾಗೆ ಮಾಡುವುದಕ್ಕೆ ಮೊದಲು ಸರಕಾರವು ಮೂರು ತಿಂಗಳ ಸೂಚನೆ ಕೊಟ್ಟು ಪರಿಣಾಮಿಸಲ್ಪಟ್ಟ ಹಿತಾಸಕ್ತಿಗಳೊಂದಿಗೆ ಸಮಾಲೋಚಿಸಬೇಕಿತ್ತು. ಈ ಪ್ರತ್ಯಾಯೋಜನೆಯು ವಿಧಿಬದ್ಧವೆ ?

## UNIT – III

Q. No.3. (a) Discuss different kinds of bias with reference to decided cases. Marks : 15

ವಿವಿಧ ತರಹದ ಪಕ್ಷಪಾತಗಳನ್ನು ನಿರ್ಣಯಿತ ಪ್ರಕರಣಗಳೊಂದಿಗೆ ಚರ್ಚಿಸಿ.

OR/ಅಥವಾ

Explain 'quasi-judicial' function. Discuss the grounds for characterising the function as 'quasi-judicial'.

'ನ್ಯಾಯಿಕ ಸ್ವರೂಪದ' ಕಾರ್ಯಗಳನ್ನು ವಿವರಿಸಿರಿ. 'ನ್ಯಾಯಿಕ ಸ್ವರೂಪದ' ಕಾರ್ಯಗಳೆಂದು ಗುರುತಿಸಲು ಇರುವ ಆಧಾರಗಳನ್ನು ಚರ್ಚಿಸಿ.

(b) 'A' was dismissed from government service on the ground that he was convicted for an offence of theft. He challenges the dismissal on the ground that he was not given an opportunity of hearing. Decide. Marks : 5

ಒಂದು ಕಳುವಿನ ಅಪರಾಧಕ್ಕಾಗಿ ಶಿಕ್ಷಿಸಲ್ಪಟ್ಟಿದ್ದಾನೆ ಎಂಬ ಕಾರಣಕ್ಕಾಗಿ 'ಅ' ನನ್ನು ಸರಕಾರಿ ಸೇವೆಯಿಂದ ಕಿತ್ತುಹಾಕಲಾಯಿತು. ತನಗೆ ಸುನಾವಣೆಯ ಅವಕಾಶವನ್ನು ನೀಡದ್ದಕ್ಕಾಗಿ ಅವನು ಕಿತ್ತುಹಾಕುವಿಕೆಯನ್ನು ಪ್ರಶ್ನಿಸುವನು. ತೀರ್ಮಾನಿಸಿರಿ.

OR/ಅಥವಾ

An inquiry was commenced by the general manger of the factory against 'A'. The Managing Director was incharge of the prosecution. After examining some witnessess the Managing Director took over the inquiry and examined the General Manager as a witness. As a result of the inquiry 'A' was dismissed. He challenges the order of dismissal as violating the rules of natural justice. Decide.

'ಅ'ನ ವಿರುದ್ಧ ಕಾರಖಾನೆಯ ಸಾಮಾನ್ಯ ವ್ಯವಸ್ಥಾಪಕನಿಂದ ವಿಚಾರಣೆಯು ಪ್ರಾರಂಭಿಸಲ್ಪಟ್ಟಿತ್ತು. ಕಾರ್ಯ ನಿರ್ವಾಹಕ ನಿರ್ದೇಶಕನು ಅಭಿಯೋಜಕನಾಗಿದ್ದನು. ಕೆಲವೊಂದು ಸಾಕ್ಷ್ಯಗಳನ್ನು ಪರೀಕ್ಷಿಸಿದ ನಂತರ ಕಾರ್ಯ ನಿರ್ವಾಹಕ ನಿರ್ದೇಶಕನು ವಿಚಾರಣೆಯನ್ನು ಕೈಗೆತ್ತಿಕೊಂಡು ಸಾಮಾನ್ಯ ವ್ಯವಸ್ಥಾಪಕನನ್ನು ಒಬ್ಬ ಸಾಕ್ಷಿಯಂತೆ ಪರೀಕ್ಷೆ ಮಾಡಿದನು. ವಿಚಾರಣೆಯ ಪರಿಣಾಮವಾಗಿ 'ಅ'ನು ವಜಾಮಾಡಲ್ಪಟ್ಟನು. ವಜಾ ಮಾಡಿದ ಆಜ್ಞೆಯು ನೈಸರ್ಗಿಕ ನ್ಯಾಯಕ್ಕೆ ವಿರುದ್ಧವಾಗಿದೆ ಎಂದು ಅವನು ಪ್ರಶ್ನಿಸುತ್ತಾನೆ. ನಿರ್ಧರಿಸಿರಿ.

## UNIT – IV

Q. No.4. (a) State the extent of liability of the government in tort. Marks : 15

ಅಪಕೃತ್ಯಗಳಿಗೆ ಸರಕಾರದ ಹೊಣೆಗಾರಿಕೆಯ ವಿಸ್ತಾರವನ್ನು ಹೇಳಿರಿ.

OR/ಅಥವಾ

Discuss the principles governing the grant of writs of 'mandamus' and 'Quo-warranto'.

'ಮ್ಯಾಂಡಮಸ್ ' ಮತ್ತು 'ಕೊ-ವಾರಂಟೋ' ಪರಮಾದೇಶಗಳನ್ನು ನೀಡುವುದನ್ನು ನಿಯಂತ್ರಿಸುವ ನಿಯಮಗಳನ್ನು ಚರ್ಚಿಸಿ.

(b) The Central Government notified an export promotion scheme declaring that the exporters of woolen textiles and goods would be entitled to import raw materials equal to 100 percent of the value of exports. Relying upon the notification 'A' a trader exported goods of the value of Rs. 25 lakhs. He sought a licence for importing raw material worth Rs. 25 lakhs. The government refused to give licence. 'A' challenges the decision in court. Decide. Marks : 5

ಉಣ್ಣೆ ಬಟ್ಟೆ ಹಾಗೂ ಸರಕುಗಳನ್ನು ನಿರ್ಯಾತ ಮಾಡಿದ ನಿರ್ಯಾತಕಾರರಿಗೆ ನಿರ್ಯಾತದ ಬೆಲೆಯ 100 ಕ್ಕೆ 100 ರಷ್ಟು ಕಿಮ್ಮತ್ತಿನ ಕಚ್ಚಾ ಸರಕುಗಳನ್ನು ಆಮದು ಮಾಡಿಕೊಳ್ಳಲು ಹಕ್ಕುಳ್ಳವರಾಗಿರುತ್ತಾರೆ ಎಂಬ ಘೋಷಣೆಯನ್ನೊಳಗೊಂಡ ನಿರ್ಯಾತ ಅಭಿವೃದ್ಧಿ ಯೋಜನೆಯನ್ನು ಕೇಂದ್ರ ಸರಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಿತು. ಈ ಪ್ರಕಟನೆಯನ್ನು ನಂಬಿ 'ಅ' ಎಂಬ ವ್ಯಾಪಾರಿಯು ರೂ. 25 ಲಕ್ಷ ಬೆಲೆಯ ಸರಕುಗಳನ್ನು ನಿರ್ಯಾತ ಮಾಡಿದನು. ಅವನು ರೂ. 25 ಲಕ್ಷ ಬೆಲೆಯ ಕಚ್ಚಾವಸ್ತುಗಳನ್ನು ಆಮದು ಮಾಡಿಕೊಳ್ಳಲು ಪರವಾನಿಗೆ ಕೋರಿದನು. ಸರಕಾರವು ಪರವಾನಿಗೆ ಕೊಡಲು ನಿರಾಕರಿಸಿತು. 'ಅ'ನು ಈ ನಿರ್ಧಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾನೆ. ನಿರ್ಧರಿಸಿರಿ.

OR/ಅಥವಾ

Write a note on right to information.

ಮಾಹಿತಿಯ ಹಕ್ಕಿನ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – V

Q. No. 5. (a) State the principles relating to judicial control over public undertakings. Marks : 15

ಸಾರ್ವಜನಿಕ ಉದ್ದಿಮೆಗಳ ಮೇಲಿನ ನ್ಯಾಯಿಕ ಹತೋಟಿಗೆ ಸಂಬಂಧಿಸಿದ ನಿಯಮಗಳನ್ನು ಹೇಳಿರಿ.

OR/ಅಥವಾ

What is the need for institution of Ombudsman ? What are the steps taken in India in this regard ?

ಆಂಬುಡ್ಸ್‌ಮನ್ ಸಂಸ್ಥೆಯ ಆವಶ್ಯಕತೆಯೇನು ? ಭಾರತದಲ್ಲಿ ಈ ಸಂಬಂಧ ಕೈಗೊಂಡ ಕ್ರಮಗಳೇನು ?

(b) Write a note on corruption Marks : 5

ಭ್ರಷ್ಟಾಚಾರದ ಬಗ್ಗೆ ಟಿಪ್ಪಣಿ ಬರೆಯಿರಿ.

OR/ಅಥವಾ

Write a note on parliamentary committees.

ಸಂಸದೀಯ ಸಮಿತಿಯ ಬಗ್ಗೆ ಟಿಪ್ಪಣಿ ಬರೆಯಿರಿ.

---